## ಸುಧಾ ಯುಗಾದಿ ವಿಶೇಷಾಂಕ- 2017ರ ಪ್ರಬಂಧ ಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

# ಬ್ಯಾಂಡೇಜ್ ಪುರಾಣ



**ಕೆ.ಪಿ. ಸತ್ಯನಾರಾಯಣ**

ಕಳೆದ ನವೆಂಬರ್ ಹದಿನೈದನೇ ತಾರೀಕು ಓವರ್‌ಹೆಡ್ ಟ್ಯಾಂಕ್ ಸ್ವಚ್ಛ ಮಾಡಲೆಂದು ಟ್ಯಾಂಕಿಗೆ ಒರಗಿಸಿಟ್ಟುಕೊಂಡ ಏಣಿಯ ಮೂರು ಮೆಟ್ಟಿಲು ಹತ್ತಿ ನಾಲ್ಕನೆಯದಕ್ಕೆ ಕಾಲಿಟ್ಟಿದ್ದಷ್ಟೇ, ಏಣಿ ಹಿಂದಕ್ಕೆ ಸರಿದು ಜಾರಿ ಬಿದ್ದು ಬಿಟ್ಟಿತು. ನಾನು ತ್ರಿಶಂಕುವಾದೆ, ಆದರೆ ವಿಶ್ವಾಮಿತ್ರ ಎಲ್ಲೋ ಬ್ಯುಸಿಯಾಗಿದ್ದುದರಿಂದ ಸಕಾಲದಲ್ಲಿ ಬಂದು ಕೈಹಿಡಿಯಲಿಲ್ಲ. ನನಗೆ ಉಳಿದಿದ್ದು ಒಂದೇ ದಾರಿ, ಪುನಃ ಭೂಮಿಗೇ ಮರಳುವುದು. ಏಣಿ ಜಾರುವುದು ಅದು ಹೇಗೋ ಮೊದಲೇ ಗೊತ್ತಾಗಿದ್ದುದರಿಂದ ಹಿಂದಕ್ಕೆ ನೆಗೆದು, ಅಂಗಾತ ಬಿದ್ದು ತಲೆ ಒಡೆದುಕೊಳ್ಳುವುದನ್ನು ಮತ್ತು ಮುಖ ಅಡಿಯಾಗಿ ಬಿದ್ದು ಹಲ್ಲು ಮುರಿದು ಮೂತಿ ವಿರೂಪಗೊಳ್ಳುವುದನ್ನು ತಪ್ಪಿಸಿಕೊಂಡೆ. ನೆಗೆದಾಗ ಬಲಗಾಲ ಹಿಮ್ಮಡಿ ಯ ಮೇಲೆ ಇಡೀ ಶರೀರದ ಭಾರ ಬಿದ್ದು, ಹಿಮ್ಮಡಿಯಲ್ಲಿ, ಮೊಣಕಾಲ ಗಂಟಿನ ಬಳಿ ಅಸಾಧ್ಯ ನೋವು. ಪಾದ ಬಲೂನಿನ ಹಾಗೆ ಊದತೊಡಗಿತು. ಹಾಗೂ ಹೀಗೂ ಕುಂಟಿಕೊಂಡು ಮಹಡಿಯಿಂದ ಕೆಳಗಿಳಿದು ಸಹೋದ್ಯೋಗಿ ಶ್ರೀನಿವಾಸ್ಗಿಗೆ ಫೋನ್ ಮಾಡಿ ಬರ ಹೇಳಿದೆ. ಅವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ಲಾಸ್ಟರ್ ಹಾಕಿಸಿ ಮನೆಗೆ ಕರೆದುಕೊಂಡು ಬಂದರು. ಇನ್ನು ಆರು ವಾರ ಕಾಲ ನನ್ನ ಪಾಡಿಗೆ ನಾನಿರೋದಷ್ಟೆ ಅಂದುಕೊಂಡೆ. ಆದರೆ ಇದು ನಮ್ಮೂರಿನ ಜಾಗತಿಕ ಸುದ್ದಿಯಾಗುತ್ತೆ ಅಂತ ಆಗ ನನಗೂ ಹೊಳೆಯಲಿಲ್ಲ. ಕನ್ನಡ ಟಿವಿ ಚಾನಲ್‌ನವರು ದಿನವಿಡೀ ನನ್ನ ಕಾಲನ್ನೇ ಫೋಕಸ್ ಮಾಡುವುದೊಂದು ಬಾಕಿಯಾಯ್ತಷ್ಟೇ!

ಈ ಬಗೆಗೆ ವಿಸ್ತಾರವಾಗಿ ಹೇಳಿದರೆ ಮಾತ್ರ ವಿಷಯದ ಗಂಭೀರತೆ ಮತ್ತು ಅದರಿಂದುಂಟಾದ ವಿನೋದ ಅರ್ಥವಾದೀತು. ಪ್ಲಾಸ್ಟರ್ ಹಾಕಿದ ಡಾಕ್ಟರಿಂದಲೇ ಶುರುವಾಗುತ್ತೆ ನನ್ನ ಬ್ಯಾಂಡೇಜ್ ಪುರಾಣ.

'ಸತ್ಯ ನಾರಾಯಣ್, ಎರಡು ವರ್ಷದ ಹಿಂದೆ ನೀವು ಶ್ರೀನಿವಾಸ್‌ನ ಕರ್ಕೊಂಡು ಬಂದಿದ್ರಿ, ಅವರಿಗೂ ಇದೇ ತರಹ ಏಟಾಗಿತ್ತು ಅಲ್ವಾ?' ಎಂದವರು ಕೇಳಿದರು. ಶ್ರೀನಿವಾಸ್ ಸುಮ್ಮನಿರಬೇಡವೇ, 'ಮುಯ್ಯಿಗೆ ಮುಯ್ಯಿ ಡಾಕ್ಟ್ರೇ' ಎಂದರು. ತಕ್ಷಣ ಡಾಕ್ಟರ್ ಅವರು 'ಮುಯ್ಯಿಗೆ ಮುಯ್ಯಿ ತೀರಿಸ್ಬೇಕು ನಿಜ, ಆದರೆ ಈ ರೀತಿ ಮುಯ್ಯಿ ತೀರಿಸೋ ಪರಿಸ್ಥಿತಿ ಯಾರಿಗೂ ಬರೋದು ಬೇಡಪ್ಪಾ' ಎಂದರು. ಪಾಪ ಅವರು ಒಳ್ಳೆಯ ಡಾಕ್ಟರು, ಇನ್ನೊಂದು ಪೇಷಂಟ್ ಬರಲಿ ನನಗೆ ಎಂಬ ದುರಾಸೆಯವರಲ್ಲ! ನನ್ನ ಕಾಲಿನ ಎಕ್ಸ್‌ರೆ ನೋಡಿದ ಡಾಕ್ಟರು 'ಕಂಗ್ರಾಟ್ಸ್' ಎಂದರು.

'ಯಾಕ್ಸಾರ್, ಏನಾಗಿದೆ?' ಕೇಳಿದೆ. 'ನಿಮ್ಮ ಕಾಲಿನ ಮೂಳೆ ಮುರಿದಿಲ್ಲ, ಸ್ವಲ್ಪ ಬ್ರೇಕ್ ಆಗಿದೆ ಅಷ್ಟೆ' ಮುರಿಯೋದಕ್ಕೂ ಬ್ರೇಕ್ ಆಗೋದಕ್ಕೂ ಏನು ವ್ಯತ್ಯಾಸ ಅಂತ ನನಗೆ ಗೊತ್ತಾಗಲಿಲ್ಲ, ಕೇಳುವಷ್ಟು ತಾಳ್ಮೆಯೂ ಇರಲಿಲ್ಲ. ಸುತ್ತಿಗೆ ತಗೊಂಡು ನಾಲ್ಕಾರು ಸಲ ಹೊಡೆದಾಗ ಆಗುವಂತೆ ಹಿಮ್ಮಡಿಯಲ್ಲಿ ಅಸಾಧ್ಯ ನೋವಿತ್ತು. 'ಕನಿಷ್ಠ ಆರು ವಾರ ಪ್ಲಾಸ್ಟರ್ ಹಾಕಲೇಬೇಕು' ಎಂದರು.

'ನಿಮ್ಮಿಷ್ಟ ಸಾರ್' ಅಂದೆ ಆ ನೋವಿನಲ್ಲೂ!

ನರ್ಸ್ ನೋವಿನ ಇಂಜೆಕ್ಷನ್ ಕೊಟ್ಟು ಮಲಗಿಸಿದರು. ಎಷ್ಟು ಹೊತ್ತಾದ್ರೂ ಡಾಕ್ಟರ್ ಪತ್ತೆಯಿಲ್ಲ. ನೋವು ಹೋಗೋಕೆ ಇಂಜೆಕ್ಷನ್ ಕೊಟ್ಟಿದ್ರೋ, ನೋವು ಬರೋಕೆ ಕೊಟ್ಟಿದ್ರೋ, ಕ್ಷಣಕ್ಷಣಕ್ಕೂ ನೋವು ಹೆಚ್ಚಾಗ್ತಾ ಇತ್ತು. ನಮ್ಮ ಡಾಕ್ಟರಿಗೋ, ಮಾತಿನಲ್ಲಿ ತೊಡಗಿದರೆ, ಹೊತ್ತು ಹೋಗಿದ್ದೇ ಗೊತ್ತಾಗುತ್ತಿರಲಿಲ್ಲ. ಆದರೆ ನನಗಲ್ಲಿ ಕ್ಷಣವೊಂದು ಯುಗವಾಗಿ ಪರಿಣಮಿಸಿತ್ತು. ದಾದಿಯ ಬಳಿ ಹೇಳಿ ಕಳಿಸಿದೆ. ಡಾಕ್ಟರ್ ಬಂದವರು 'ಓ ಸ್ಸಾರಿ, ಯಾರೋ ಬಂದಿದ್ರು, ಮಾತಾಡ್ತಾ ಕೂತ್ಬಿಟ್ಟೆ. ನಾನು ಬಂದಾಯ್ತಲ್ಲ, ಪ್ಲಾಸ್ಟರ್ ಹಾಕೋಣಂತೆ. ಹಿಂದಿನ ಕಾಲದ ಹಾಗೆ ಈಗೆಲ್ಲಾ ಸಿಮೆಂಟ್ ಪ್ಲಾಸ್ಟರ್ ಹಾಕಲ್ಲ. ಹೊಸಾ ಥರದ್ದು ಬಂದಿದೆ. ಕಾಸ್ಟ್ಲಿ, ಹೆಚ್ಚು ಭಾರ ಇರಲ್ಲ, ಕಾಲಿಗೂ ಚೆನ್ನಾಗಿ ಕಾಣುತ್ತೆ' ಎಂದರು. ಚಪ್ಪಲಿ ಅಂಗಡಿಯವನೊಬ್ಬ ಗಿರಾಕಿಗೆ 'ಈ ಚಪ್ಪಲಿ ತಗೋಳಿ ಸಾರ್, ನಿಮ್ ಮೊಕಕ್ಕೆ ಚೆನ್ನಾಗಿ ಒಪ್ಪುತ್ತೆ!' ಅಂತ ಹೇಳ್ತಾ ಇದ್ದದ್ದು ನೆನಪಾಯ್ತು.

ಅಂದಿನಿಂದ ನನ್ನ ಕಡ್ಡಾಯ ಬಾಣಂತನ ಶುರುವಾಯ್ತು. ಯಾವಾಗ್ಲೂ ಕಾಲು ಚಾಚಿಕೊಂಡೇ ಕೂತಿರಬೇಕು, ಕೆಳಗೆ ಬಿಟ್ರೆ ಮತ್ತೆ ಊದುತ್ತೆ ಅಂತ ಡಾಕ್ಟರ್ ಹೇಳಿಬಿಟ್ಟಿದ್ರು. ಕೂತಲ್ಲೇ ತಿಂಡಿ ಊಟ ಎಲ್ಲಾ, ತಟ್ಟೆ ಲೋಟದಲ್ಲೇ ಕೈ ತೊಳೆದುಕೊಳ್ಳೋದು. ಸ್ನಾನಕ್ಕೆ ಸ್ಟೂಲು, ಪ್ಲಾಸ್ಟರ್ ಒಳಕ್ಕೆ ನೀರು ಹೋಗದ ಹಾಗೆ ಕಾಲಿಗೆ ಪ್ಲಾಸ್ಟಿಕ್ ಚೀಲದ ಕವಚ. ಯಾರಿಗುಂಟು, ಯಾರಿಗಿಲ್ಲ, ಒಟ್ಟಿನಲ್ಲಿ ರಾಜಯೋಗ! ಇಂಥದ್ದನ್ನು ನೋಡಿಯೇ ಇರಬೇಕು, ಒಂದಲ್ಲ ಒಂದು ದಿನ ಕಾಲಿಗೆ ಬ್ಯಾಂಡೇಜ್ ಹಾಕಿಸ್ಕೋಬೇಕು ಅನ್ನೋ ಆಸೆ ಇತ್ತಂತೆ ಶ್ರೀನಿವಾಸ್ ಗೆ ಚಿಕ್ಕಂದಿನಿಂದ. ಅವರ ಬಾಲ್ಯದ ಆಸೆ ಎರಡು ವರ್ಷದ ಹಿಂದೆ ಪೂರೈಸಿತ್ತು.

ಸುದ್ದಿ ಹೇಗೆ ಹಬ್ಬಿತೋ ಗೊತ್ತಿಲ್ಲ, ಮೊದಲ ವಾರವಂತೂ ಪ್ರತಿನಿತ್ಯ ನಾಲ್ಕಾರು ಮಂದಿ ನನ್ನನ್ನು, ಅಲ್ಲಲ್ಲ ನನ್ನ ಕಾಲನ್ನು, ನೋಡಲು ಬರತೊಡಗಿದರು. ಕಾಲಿಂಗ್ ಬೆಲ್ ಸದ್ದಾದರೆ ಸಾಕು, ಮಗಳು ನೀತು 'ಅಪ್ಪಾ, ಕಾಲು ನೋಡೋರು ಬಂದ್ರು' ಅನ್ನೋಕೆ ಶುರು ಮಾಡಿದಳು. ಮಗಳು ಅಳಿಯ, ಬೀಗರು, ಹತ್ತಿರದ ಬಂಧುಗಳು ಎಲ್ಲಾ ಬರತೊಡಗಿದರು. ಬಂದವರಿಗೆಲ್ಲಾ ನನ್ನ ಕಾಲಿನ ಪುರಾಣ ಸವಿಸ್ತಾರವಾಗಿ ಹೇಳೋ ಉತ್ಸಾಹ ನನಗೂ ಇತ್ತು. ನಾನು ಬೀಳುವಾಗ ಹೇಗೆ ಎಚ್ಚರಿಕೆಯಿಂದ ಬಿದ್ದೆ ಅನ್ನೋದನ್ನು ಹೆಮ್ಮೆಯಿಂದ ಹೇಳಿಕೊಂಡರೆ, ನನ್ನ ಮನೆಯವಳು 'ಎಚ್ಚರಿಕೆಯಿಂದ ಬೀಳೋದು ಅಂದ್ರೇನು?' ಎಂದು ಆಡಿಕೊಳ್ಳ ತೊಡಗಿದಳು. ಬರುಬರುತ್ತಾ ನನ್ನ ಉತ್ಸಾಹವೂ ತಗ್ಗಿತು, ವಿವರಣೆ ಡಿಟೇಲ್‌ನಿಂದ ನಾನ್ ಡಿಟೇಲ್‌ಗೆ ಇಳಿಯಿತು.

ಅದು ಒಂದು ರೀತಿ ಎಡವಟ್ಟಿಗೂ ಕಾರಣವಾಗುತ್ತೆ ಅಂತ ಒಂದೆರಡು ದಿನಗಳಲ್ಲಿಯೇ ಗೊತ್ತಾಯಿತು. ಒಂದು ದಿನ ಒಬ್ಬ ಸಹೋದ್ಯೋಗಿ ಬಂದಿದ್ದರು.